ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 5, MAR-APR 2021, 43-53
©*IIMRD*, Mysuru
IIMRD JOURNALS
www.iimrd.com

# ಹತ್ತಿಗಿರಣಿಗಳ ದುಡಿಮೆಗಾರರು: ದಾವಣಗೆರೆ ತಾಲೂಕು ಅನುಲಕ್ಷಿಸಿ

ಪ್ರಕಾಶ್ ಎಚ್. ಬಿ[1] ಮತ್ತು ಡಾ.ದೊಡ್ಡಮನಿ ಲೋಕರಾಜ್[2]

**ಪೀಠಿಕೆ**

ಔದ್ಯೋಗಿಕರಣವು ಉತ್ಪಾದಕ ಕೇಂದ್ರ ಮತ್ತು ಸಿದ್ಧ ವಸ್ತುಗಳ ನಿರ್ಮಾಣದ ಕಾರ್ಯಗಳ ಅಭಿವೃದ್ಧಿಯನ್ನು ಒಳಗೊಂಡಿರುತ್ತದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಔದ್ಯೋಗಿಕರಣಕ್ಕೆ ಅತ್ಯಂತ ಮಹತ್ವವಿದೆ. ತೀವ್ರಗತಿಯ ಔದ್ಯೋಗಿಕರಣವಿಲ್ಲದೆ ಆರ್ಥಿಕ ಅಭಿವೃದ್ಧಿ ಸಾಧ್ಯವಿಲ್ಲ. ಔದ್ಯೋಗಿಕರಣವು ರಾಷ್ಟ್ರೀಯ ಹಾಗೂ ತಲಾ ವರಮಾನವನ್ನು ವೃದ್ಧಿಸುತ್ತದೆ. ನಿರುದ್ಯೋಗ ಮತ್ತು ಅರೆ ನಿರುದ್ಯೋಗವನ್ನು ಕಡಿಮೆ ಮಾಡುತ್ತದೆ ಮತ್ತು ಕೃಷಿ ವಲಯದ ಉದ್ಯಮಗಳನ್ನು ಪ್ರೋತ್ಸಾಹಿಸುತ್ತದೆ. ಹಾಗೂ ಸ್ಥಿರತೆ ಮತ್ತು ವ್ಯಾಪಾರವನ್ನು ವಿಸ್ತರಿಸಿ ಸರ್ಕಾರಿ ವರಮಾನವನ್ನು ಹೆಚ್ಚಿಸುತ್ತದೆ. ಸಾರ್ವಜನಿಕ ವಲಯದ ಕೈಗಾರಿಕೆಗಳ ಜೊತೆಯಲ್ಲಿ ಖಾಸಗಿ ವಲಯದ ಕೈಗಾರಿಕೆಗಳು ಮುಖ್ಯವಾಗಿವೆ. ಇಂತಹ ಕೈಗಾರಿಕೆಗಳಲ್ಲಿ ಹತ್ತಿಗಿರಣಿ ಕೈಗಾರಿಕೆ ಒಂದಾಗಿದೆ. ಭಾರತದಲ್ಲಿ ಇದು ಅಗ್ರ ಸ್ಥಾನವನ್ನು ಹೊಂದಿದೆ. ಸುಮಾರು 11.5 ಲಕ್ಷ ಜನರಿಗೆ ನೇರ ಉದ್ಯೋಗ ಒದಗಿಸಿದೆ. ಸಂಘಟಿತ ವಲಯದ ಒಟ್ಟು ಉದ್ಯೋಗಸ್ಥರಲ್ಲಿ ಶೇ 18 ರಷ್ಟು ಜನ ಇದರಲ್ಲಿ ತೊಡಗಿದ್ದಾರೆ.

ಇದಲ್ಲದೆ, ಈ ಕೈಗಾರಿಕೆ ಪರೋಕ್ಷವಾಗಿ ಲಕ್ಷಾಂತರ ಜನರಿಗೆ ಉದ್ಯೋಗವಕಾಶವನ್ನು ಒದಗಿಸಿದೆ. ಜಗತ್ತಿನಲ್ಲಿ ಹತ್ತಿ ಬಟ್ಟೆಯನ್ನು ಉತ್ಪಾದಿಸುವ ದೇಶಗಳಲ್ಲಿ ಭಾರತಕ್ಕೆ ಪ್ರಥಮ ಸ್ಥಾನ ಲಭಿಸಿದೆ. ಹತ್ತಿ ಜವಳಿ ವ್ಯಾಪಾರದಲ್ಲಿ ಭಾರತಕ್ಕೆ ಜಗತ್ತಿನಲ್ಲಿಯೇ ಎರಡನೇ ಸ್ಥಾನ ದೊರೆತಿದೆ. ಮೊಟ್ಟಮೊದಲನೆಯ ಹತ್ತಿ ಗಿರಣಿಯು 1818ರಲ್ಲಿ ಕೊಲ್ಕತ್ತಾದ ಬಳಿ ಸ್ಥಾಪನೆಯಾಯಿತು. ಆ ನಂತರ ಮುಂಬೈ, ಸೊಲ್ಲಾಪುರ ಮತ್ತು ಅಹಮದಾಬಾದ್‌ಗಳಲ್ಲಿ ಗಿರಣಿಗಳು ಆರಂಭವಾದವು. ಪ್ರಸ್ತುತ ಲೇಖನದಲ್ಲಿ ದಾವಣಗೆರೆ ತಾಲೂಕಿನ ಹತ್ತಿ ಗಿರಣಿ ಕೈಗಾರಿಕೆಯಲ್ಲಿ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲಾಗಿದೆ.

---

*[1] ಸಂಶೋಧಕರು (ಸಮಾಜಶಾಸ್ತ್ರ), ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ ಮತ್ತು ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಶ್ರೀ.ಮಂಜುನಾಥಸ್ವಾಮಿ ಪ್ರ.ದ.ಕಾಲೇಜು, ದಾವಣಗೆರೆ.*

*[2] ಸಂಶೋಧನಾ ಮಾರ್ಗದರ್ಶಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ ಮತ್ತು ಸಹಾಯಕ ಪ್ರಾಧ್ಯಾಪಕರು,ಸಮಾಜಶಾಸ್ತ್ರ ವಿಭಾಗ, ಸ.ಪ್ರ.ದ.ಕಾಲೇಜು, ಜಗಳೂರು*

**ಸಾಹಿತ್ಯ ಪರಾಮರ್ಶನ**

ಉತ್ತಮ್ ಪೌಲ್ (2013) ರವರು ತಮ್ಮ ಸಂಶೋಧನಾ ಲೇಖನದಲ್ಲಿ ವಿವರಿಸಿರುವಂತೆ ಅಸಂಘಟಿತ ಗೃಹ/ಸಣ್ಣ/ಗುಡಿ ಕೈಗಾರಿಕೆಗಳ, ಯಾಂತ್ರಿಕ ಮಗ್ಗ/ ಬಟ್ಟೆ ನೇಯುವ ಯಂತ್ರಗಳಲ್ಲಿ ದುಡಿಯುವ ದುಡಿಮೆಗಾರರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಮತ್ತು ಅವರ ಅಭಿವೃದ್ಧಿಯ ಬಗ್ಗೆ ವಿವರಿಸಿದ್ದಾರೆ. ಈ ವಲಯವು ಶೇಕಡ 63ರಷ್ಟು ಬಟ್ಟೆ ಉತ್ಪಾದನೆಯನ್ನು, ಶೇಕಡ 48.15 ಲಕ್ಷ ವ್ಯಕ್ತಿಗಳು ಭಾರತದಲ್ಲಿ ಉದ್ಯೋಗವನ್ನು ಹೊಂದಿದ್ದಾರೆ. ಸರ್ಕಾರಕ್ಕೆ ಆದಾಯ ತರುವಲ್ಲಿ ಇಂತಹ ಕಾರ್ಖಾನೆಗಳು ಮುಖ್ಯವಾಗಿವೆ. ಅನೇಕ ಉದ್ಯೋಗಾವಕಾಶಗಳು ಒದಗಿದ್ದು, ಅನೇಕರು ಅನಕ್ಷರಸ್ಥರಾಗಿದ್ದು ಕಲ್ಯಾಣ ಕಾರ್ಯಕ್ರಮಗಳು ಮತ್ತು ಶಾಸನಾತ್ಮಕ ಕ್ರಮಗಳ ಬಗ್ಗೆ ಗೊತ್ತಿಲ್ಲ, ಅನೇಕ ದುಡಿಮೆಗಾರರು ಬಾಂಗ್ಲಾ ದೇಶದಿಂದ ಬಂದಿರುವ ನಿರಾಶ್ರಿತರಾಗಿದ್ದು ತಮ್ಮ ದುಡಿಮೆ ಮತ್ತು ವೇತನ ಹಾಗೂ ಇತರೆ ಸೌಲಭ್ಯಗಳ ಬಗ್ಗೆ ಯೋಚಿಸದೇ ಇರುವುದರಲ್ಲಿ ಬದುಕುವುದರ ಬಗ್ಗೆ ತಿಳಿಸಿದ್ದಾರೆ.

ಸ್ವರ್ಣಲತಾ ಬಿ (2016) ರವರು ಗುತ್ತಿಗೆ ಕಾರ್ಮಿಕರ ಕೆಲಸ/ದುಡಿಮೆಯ ತೃಪ್ತಿಯ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಗುತ್ತಿಗೆ ಕಾರ್ಮಿಕರ ಕೆಲಸದ ತೃಪ್ತಿ ಹಾಗೂ ಸಂಘಟನೆಯು ಅತ್ಯಂತ ಕಷ್ಟಕರವಾಗಿದ್ದು, ಇದು ಸಾಮಾನ್ಯವಾಗಿ ಉತ್ಪಾದಕತೆ ಮತ್ತು ವೈಯಕ್ತಿಕ ಯೋಗಕ್ಷೇಮಕ್ಕೆ ನೇರವಾಗಿ ಸಂಬಂಧಿಸಿದೆ ಎಂದು ಗ್ರಹಿಸಿದೆ. ವಿಶೇಶವಾಗಿ ಗುತ್ತಿಗೆ ಕಾರ್ಮಿಕರ ವಿಷಯದಲ್ಲಿ ಉದ್ದಿಮೆದಾರರು ತಮ್ಮ ಕೆಲಸದಲ್ಲಿ ತೃಪ್ತರಾಗಲು ಹೋರಾಟ ಮಡುತ್ತಿದ್ದಾರೆ. ಈ ಅಧ್ಯಯನವು ಸೈರ್‌ಲೈಟ್ ಉದ್ಯಮದಲ್ಲಿ ಕಾರ್ಮಿಕರ ಕೆಲಸ ಅಥವಾ ದುಡಿಮೆ ತೃಪ್ತಿಯ ಬಗ್ಗೆ ವಿಶ್ಲೇಷಿಸಿದೆ.

ನಾಗ್‌ಮೋಹನ್ ದಾಸ್ ಹೆಚ್ ಎನ್ (2013) ಒಟ್ಟು ದುಡಿಮೆಗಾರರಲ್ಲಿ ಶೇ.10 ರಷ್ಟು ಸಂಘಟಿತ ವಲಯದಲ್ಲಿ ಮತ್ತು ಶೇ 90 ರಷ್ಟು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಇಂತಹ ವಲಯಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕನಿಷ್ಟ ವೇತನ ಮತ್ತು ಒಪ್ಪಿದ ವೇತನವನ್ನೂ ಸಹ ನಿಗಧಿತ ಸಮಯಕ್ಕೆ ನೀಡುತ್ತಿಲ್ಲ. ದುಡಿಮೆಗಾರರ ಕೆಲಸದ ಸಮಯವನ್ನು ನಿಗಧಿಗೊಳಿಸಿಲ್ಲ. ಮಾಡಿದ ಹೆಚ್ಚಿನ ಕೆಲಸಕ್ಕೆ ಹೆಚ್ಚಿನ ವೇತನ ಸಿಗುತ್ತಿಲ್ಲ ಅಪಾಯಕಾರಿ ಕೆಲಸ ಮಾಡುತ್ತಿದ್ದಾಗ ಸುರಕ್ಷಿತ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಏನಾದರು ಅವಘಡ ನಡೆದಾಗ ಪ್ರಮುಖ ಸೌಲಭ್ಯಗಳಾದ ಆರ್ಥಿಕ ಮತ್ತು ವೈದ್ಯಕೀಯ ಸಹಾಯವಿಲ್ಲ. ಒಂದು ವೇಳೆ ಸಾವು ಸಂಭವಿಸಿದಾಗ ಯಾರೂ ಹೊಣೆ ಹೊರುತ್ತಿಲ್ಲ ಎಂಬುದಾಗಿ ಹೇಳಿದ್ದಾರೆ.

ಮಧುಸೂದನ್ ರಂಗೇನಹಳ್ಳಿ ಕು ಸ (2017) ತಮ್ಮ ಲೇಖನದಲ್ಲಿ ವಿವರಿಸಿರುವಂತೆ ಅಸಂಘಟಿತ ವಲಯದಲ್ಲಿ ದುಡಿಯುವವರು ಹೆಚ್ಚಾಗಿ ಕೆಳ ಜಾತಿಯವರು/ತಳಜಾತಿಯವರು,

ಧಾರ್ಮಿಕ ಅಲ್ಪ ಸಂಖ್ಯಾತರು, ಬುಡಕಟ್ಟು ಸಮುದಾಯದವರು ಮತ್ತು ಶೋಷಣೆಗೆ ಒಳಗಾದ ವರ್ಗದವರು ಇಂತಹ ವರ್ಗದವರಲ್ಲಿ ಶೇ 47–48 ರಷ್ಟು ದುಡಿಯುವವರು ತಮ್ಮ ಹೊಂದಿದ ದುಡಿಮೆಗೆ ಸಂಬಂಧಿಸಿದಂತೆ ನೈಪುಣ್ಯ ಹಾಗೂ ವೃತ್ತಿ ತರಬೇತಿ ಹೊಂದಿಲ್ಲ, ಇಂತಹ ವಲಯದಲ್ಲಿ ಶೇ 65 ರಷ್ಟು ಮಹಿಳಾ ದುಡಿಮೆಗಾರರಿದ್ದಾರೆ. ಈ ವಲಯವು ದೇಶದ ಅಭಿವೃದ್ಧಿಗೆ ಶೇ 50 ರಷ್ಟು ಪಾಲನ್ನು ನೀಡುತ್ತಿದ್ದು ಆದರೆ ಭಾರತ ಸರ್ಕಾರವು ಇಂತಹ ದುಡಿಮೆಗಾರರ ಬಗ್ಗೆ ಗಮನ ನೀಡಿಲ್ಲ.

ರಾಷ್ಟ್ರೀಯ ಮಾದರಿ ಸಮೀಕ್ಷೆ ವರದಿ (2012) ಪ್ರಕಾರ 43.7 ಕೋಟಿ ಜನ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ವರ್ಷವರ್ಷವೂ ಇಂತಹ ವಲಯಗಳಲ್ಲಿ ದುಡಿಯುವವರ ಸಂಖ್ಯೆ ಹೆಚ್ಚಾಗುತ್ತಲಿದೆ ಎಂಬ ಆತಂಕವನ್ನು ತಿಳಿಸಿದ್ದಾರೆ.

ಅರುಪ್ ಮಿತ್ರಾ **(2014)** ಇವರ ಅಧ್ಯಯನದಲ್ಲಿ ಅಸಂಘಟಿತ ವಲಯದಲ್ಲಿನ ದುಡಿಮೆಗಾರರ ವಾಸ್ತವಿಕತೆಯನ್ನು ವಿವರಿಸಿದ್ದಾರೆ. ಭಾರತದಲ್ಲಿ ನಗರ ಅಸಂಘಟಿತ ವಲಯದ ವಸ್ತುಸ್ಥಿತಿಯನ್ನು ವಿಶ್ಲೇಷಣೆ ಮಾಡಿದ್ದಾರೆ. ಗ್ರಾಮೀಣ ವಲಸಿಗರು ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಮತ್ತು ಅತೀ ಕಡಿಮೆ ಆದಾಯ ಹೊಂದಿರುವ ಕುಟುಂಬಗಳ ಜೀವನ ನಿರ್ವಹಣೆಯಲ್ಲಿ ಮುಖ್ಯವಾಗಿದೆ. ತಮ್ಮ ಅಧ್ಯಯನದಲ್ಲಿ ಅಸಂಘಟಿತ ವಲಯದವರ ಪಾತ್ರವನ್ನು ವಿವರಿಸಿರುವುದರ ಜೊತೆ ಪ್ರಮುಖ ಸಮಸ್ಯೆಗಳಾದ ಕಡಿಮೆ ಉತ್ಪಾದಕತೆ, ಸಣ್ಣ ಪ್ರಮಾಣದ ಚಟುವಟಿಕೆಗಳು, ಆಧುನಿಕ ತಂತ್ರಜ್ಞಾನದ ಕೊರತೆ, ಮಾಹಿತಿಗಳ ಅಲಭ್ಯತೆ, ಬಂಡವಾಳದ ಕೊರತೆ, ಶಿಕ್ಷಣದ ಕೊರತೆ ಇವೆಲ್ಲವು ಪ್ರಮುಖ ಸಮಸ್ಯೆಗಳಾಗಿವೆ ಎಂದು ತಿಳಿಸಿದ್ದಾರೆ.

**ಅಧ್ಯಯನದ ಉದ್ದೇಶಗಳು**

- ಹತ್ತಿ ಗಿರಣಿ ದುಡಿಮೆಗಾರರ ಸಮಾಜೋ–ಆರ್ಥಿಕ ಸ್ಥಿತಿಗತಿಗಳ ಬಗ್ಗೆ ತಿಳಿದುಕೊಳ್ಳುವುದು.
- ಹತ್ತಿ ಗಿರಣಿ ದುಡಿಮೆಗಾರರ ಸಮಸ್ಯೆಗಳ ಕುರಿತು ಅಧ್ಯಯನ ನಡೆಸುವುದು.

**ಅಧ್ಯಯನದ ವಿಧಾನ**

ಪ್ರಸ್ತುತ ಅಧ್ಯಯನದಲ್ಲಿ ಪ್ರಾಥಮಿಕ ಮಾಹಿತಿಯನ್ನು ನೇರವಾಗಿ ಹತ್ತಿ ಗಿರಣಿಗಳಿಗೆ ಭೇಟಿ ನೀಡಿ ಅಲ್ಲಿನ ಮಾಲಿಕರು ಹಾಗೂ ದುಡಿಮೆಗಾರರನ್ನು ಬೇಟಿ ಮಾಡಿ ಸಂದರ್ಶನದ ವಿಧಾನದ ಮೂಲಕ ಮಾಹಿತಿಯನ್ನು ಕಲೆ ಹಾಕಲಾಗಿದೆ. ಅನುಷಂಗಿಕ ಮಾಹಿತಿಯನ್ನು ಲಭ್ಯವಿರುವ ಪುಸ್ತಕಗಳು, ಲೇಖನಗಳು ಹಾಗೂ ವರದಿಗಳನ್ನು ಆಧರಿಸಿ ಕಲೆಹಾಕಲಾಗಿದೆ.

**ದತ್ತಾಂಶಗಳ ವಿಶ್ಲೇಷಣೆ**

**ಸಮುದಾಯ ಸಂಘಟನೆ ಮತ್ತು ಸದಸ್ಯತ್ವ**

ಸಮಾಜದಲ್ಲಿ ಸಮುದಾಯಗಳು ತಮ್ಮ ಜನರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ತಮ್ಮದೆ ಸಂಘಟನೆಯನ್ನು ಹೊಂದುವುದು ಸಾಮಾನ್ಯ. ಪ್ರಸ್ತುತ ಹತ್ತಿ ಗಿರಣಿಯ ದುಡಿಮೆಗಾರರ

ಸಮುದಾಯ ಸಂಘಟನೆ ಮತ್ತು ಸದಸ್ಯತ್ವದ ಕುರಿತ ವಿವರಗಳನ್ನು ಕೋಷ್ಟಕ 1 ರಲ್ಲಿ ಸಂಕ್ಷೇಪಿಸಲಾಗಿದೆ.

**ಕೋಷ್ಟಕ 1: ಸಮುದಾಯ ಸಂಘಟನೆ ಮತ್ತು ಸದಸ್ಯತ್ವದ ವಿವರ**

| ವಿವರ | ಸದಸ್ಯತ್ವ ಪಡೆದವರು | ಸದಸ್ಯತ್ವ ಪಡೆದಿಲ್ಲದಿರುವವರು | ಒಟ್ಟು |
|---|---|---|---|
| ಸಂಘಟನೆ ಇದೆ | 19 (43.2) | 20 (45.4) | 39 (88.6) |
| ಸಂಘಟನೆ ಇಲ್ಲ | 0 (0.0) | 5 (11.4) | 5 (11.4) |
| **ಒಟ್ಟು** | 19 (43.2) | 25 (56.8) | 44 (100.0) |

**ಮೂಲ: ಕ್ಷೇತ್ರ ಕಾರ್ಯ**

ಕೋಷ್ಟಕ 1 ರಲ್ಲಿ ಸಂಘಟನೆ ಮತ್ತು ಸದಸ್ಯತ್ವದ ವಿವರವನ್ನು ನೀಡಲಾಗಿದೆ. ಒಟ್ಟು ಪ್ರತಿಸ್ಪಂದಕರಲ್ಲಿ ಶೇ. 88.6 ರಷ್ಟು ಕಾರ್ಮಿಕರು ಸಮುದಾಯ ಸಂಘಟನೆ ಇದೆ ಎಂದು ಹೇಳಿದ್ದು ಶೇ.11.4 ರಷ್ಟು ಕಾರ್ಮಿಕರು ಸಂಘಟನೆ ಇಲ್ಲ ಎಂದು ಹೇಳಿದ್ದಾರೆ. ಸಂಘಟನೆ ಇದೆ ಎಂದು ಹೇಳಿರುವ ಪ್ರತಿಸ್ಪಂದಕರಲ್ಲಿ ಶೇ.43.2 ರಷ್ಟು ಕಾರ್ಮಿಕರು ಸದಸ್ಯತ್ವ ಪಡೆದಿರುವುದಾಗಿ ಹೇಳಿದ್ದರೆ, ಶೇ.45.4 ರಷ್ಟು ಸದಸ್ಯರು ಸಂಘಟನೆಯ ಸದಸ್ಯತ್ವ ಪಡೆದಿಲ್ಲ ಎಂದಿದ್ದಾರೆ.

**ಮಹಿಳಾ ಸಮಾನತೆ ಮಹಿಳೆಯರ ಹೊರಗಡೆ ದುಡಿಯುವುದು**

ಬದಲಾವಣೆ ಜಗದ ನಿಯಮ ಜಗತ್ತು ಬದಲಾದಂತೆ ನಮ್ಮ ಸಂಸ್ಕೃತಿ ತಿಳುವಳಿಕೆಯಲ್ಲಿಯೂ ಬದಲಾವಣೆ ಸಾಮಾನ್ಯ. ಸ್ತ್ರೀ ಪುರುಷರ ನಡುವಿನ ಅಸಮಾನತೆಯ ಅಂತರ ಕಡಿಮೆಯಾಗಿದೆ ಎನ್ನಬಹುದು. ಲಿಂಗ ಸಮಾನತೆಯು ಸುಸ್ಥಿರ ಅಭಿವೃದ್ಧಿಗೆ ಅಂತರ್ಗತವಾಗಿ ಸಂಬಂಧ ಹೊಂದಿದೆ ಮತ್ತು ಎಲ್ಲರಿಗೂ ಮಾನವ ಹಕ್ಕುಗಳ ಸಾಕ್ಷಾತ್ಕಾರಕ್ಕೆ ಪ್ರಮುಖ ಆಧಾರವಾಗಿದೆ. ಲಿಂಗ ಸಮಾನತೆಯ ಒಟ್ಟಾರೆ ಉದ್ದೇಶವೆಂದರೆ ಸಮಾಜದಲ್ಲಿ ಮಹಿಳೆಯರು ಮತ್ತು ಪುರುಷರು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಒಂದೇ ರೀತಿಯ ಅವಕಾಶಗಳು, ಹಕ್ಕುಗಳು ಮತ್ತು ಕಟ್ಟುಪಾಡುಗಳನ್ನು ಅನುಭವಿಸುವುದು. ಅಧಿಕಾರ ಮತ್ತು ಪ್ರಭಾವದ ವಿತರಣೆಯಲ್ಲಿ ಎರಡೂ ಲಿಂಗಗಳು ಸಮಾನವಾಗಿ ಹಂಚಿಕೊಳ್ಳಲು ಸಾಧ್ಯವಾದಾಗ ಪುರುಷರು ಮತ್ತು ಮಹಿಳೆಯರ ನಡುವೆ ಸಮಾನತೆ ಇರುತ್ತದೆ.ಇದಕ್ಕೆ ಸಂಬಂಧಿಸಿದಂತೆ ಅಧ್ಯಯನಕ್ಕೊಳಪಡಿಸಿದ ದುಡಿಮೆಗಾರರ

ಕುಟುಂಬದಲ್ಲಿ.ಮಹಿಳಾ ಸಮಾನತೆ ಹಾಗೂ ಮಹಿಳೆಯರ ಹೊರಗಡೆ ದುಡಿಯುವುದರ ಕುರಿತ ಮಾಹಿತಿದಾರರ ಅಭಿಪ್ರಾಯವನ್ನು ಕೋಷ್ಟಕ 2 ರಲ್ಲಿ ಸಂಕ್ಷೇಪಿಸಲಾಗಿದೆ.

**ಕೋಷ್ಟಕ 2: ಮಹಿಳಾ ಸಮಾನತೆ ಮತ್ತು ಮಹಿಳೆಯರ ಹೊರಗಡೆ ದುಡಿಯುವಿಕೆ**

| ಮಹಿಳಾ ಸಮಾನತೆ | ಮಹಿಳೆಯರ ಹೊರಗಡೆ ದುಡಿಯುವುದು | | ಒಟ್ಟು |
|---|---|---|---|
| | ಒಪ್ಪುತ್ತೇವೆ | ಒಪ್ಪುವುದಿಲ್ಲ | |
| ಇದೆ | 34(77.2) | 5(11.4) | 39 (88.6) |
| ಇಲ್ಲ | 5(11.4) | 0 | 5 (11.4) |
| ಒಟ್ಟು | 39 (88.6) | 5 (11.4) | 44 (100.0) |

**ಮೂಲ: ಕ್ಷೇತ್ರ ಕಾರ್ಯ**

ಪ್ರತಿಶತ 88.6 ರಷ್ಟು ದುಡಿಮೆಗಾರರು ತಮ್ಮ ಕುಟುಂಬಗಳಲ್ಲಿ ಮಹಿಳಾ ಸಮಾನತೆ ಇದೆ ಎಂದಿದ್ದಾರೆ. ಇವರಲ್ಲಿ ಪ್ರತಿಶತ 77.2 ರಷ್ಟು ಜನ ಮಹಿಳೆಯರ ಹೊರಗಡೆ ದುಡಿಯುವುದನ್ನು ಪ್ರೋತ್ಸಾಹಿಸುತ್ತೇವೆ ಎಂದಿದ್ದಾರೆ.

**ಕೋಷ್ಟಕ 3: ದುಡಿಮೆಗಾರರ ಕುಟುಂಬದ ಗಾತ್ರ ಮತ್ತು ಆದಾಯ**

| ಕುಟುಂಬದ ಗಾತ್ರ | ಆದಾಯ | | ಒಟ್ಟು | ಪ್ರತಿಶತ | ಒಟ್ಟು ಪ್ರತಿಶತ |
|---|---|---|---|---|---|
| | 10000–15000 | 15001 ಮೇಲ್ಪಟ್ಟು | | | |
| 3 | 2 (4.5) | 0 | 2 | 4.5 | 4.5 |
| 4–6 | 12 (27.2) | 16 (36.36) | 28 | 63.6 | 68.1 |
| 7+ | 4(9.0) | 10 (22.7) | 14 | 31.8 | 100 |
| ಒಟ್ಟು | 18 | 26 | 44 | 100 | |
| ಪ್ರತಿಶತ | 41 | 59 | 100.0 | | |
| ಒಟ್ಟು ಪ್ರತಿಶತ | 41 | 100 | | | |
| ಪಿಯರ್ಸನ್ ಕೊರಿಲೇಷನ್: 0.25 | | | | | |

**ಮೂಲ: ಕ್ಷೇತ್ರ ಕಾರ್ಯ**

**ದುಡಿಮೆಗಾರರ ಕುಟುಂಬದ ಗಾತ್ರ ಮತ್ತು ಆದಾಯ**

ಆರ್ಥಿಕತೆಯಲ್ಲಿ ಭೂಮಿ ಅಥವಾ ಸ್ಥಿರ ಆಸ್ತಿಗಳನ್ನ ಹೊಂದದ ಬಹುಪಾಲು ಜನಸಂಖ್ಯೆ ತಮ್ಮ ಜೀವನೋಪಾಯಕ್ಕಾಗಿ ಶ್ರಮವನ್ನು ಮಾರಾಟ ಮಾಡುವುದು ಕೊನೆಯ ಆಯ್ಕೆಯಾಗಿದೆ. ಕೋಷ್ಟಕ 3 ರಲ್ಲಿ ದುಡಿಮೆಗಾರರ ಕುಟುಂಬದ ಗಾತ್ರ ಮತ್ತು ಆದಾಯದ ಕುರಿತ ಅಂಕಿಅಂಶಗಳನ್ನು

ಸಂಕ್ಷೇಪಿಸಲಾಗಿದೆ. ಅಧ್ಯಯನಕ್ಕೊಳಪಡಿಸಿದ ದುಡಿಮೆಗಾರರ ಕುಟುಂಬದ ಗಾತ್ರ ಮೂರು ವಿಧದಲ್ಲಿ ವರ್ಗೀಕರಿಸಲಾಗಿದ್ದು ಪ್ರತಿಶತ 5 ರಷ್ಟು ಕುಟುಂಬಗಳು ಮೂರು ಜನ ಸದಸ್ಯರನ್ನು ಹೊಂದಿವೆ. ಪ್ರತಿಶತ 5 ರಷ್ಟು ಕುಟುಂಬಗಳು ಮೂರು ಜನ ಸದಸ್ಯರನ್ನು ಹೊಂದಿವೆ. ಪ್ರತಿಶತ 63.6 ರಷ್ಟು ಕುಟುಂಬಗಳು 4–6 ಜನ ಸದಸ್ಯರನ್ನು ಹೊಂದಿವೆ. ಪ್ರತಿಶತ 31.8 ರಷ್ಟು ಕುಟುಂಬಗಳು ಏಳಕ್ಕಿಂತ ಹೆಚ್ಚು ಜನ ಸದಸ್ಯರನ್ನು ಹೊಂದಿವೆ. ಪ್ರತಿಶತ 41 ರಷ್ಟು ದುಡಿಮೆಗಾರರು ಕನಿಷ್ಠ 10000 ರಿಂದ 15000 ಸಾವಿರ ರೂ. ಗಳ ಒಟ್ಟು ಕುಟುಂಬದ ಆದಾಯವನ್ನು ಹೊಂದಿದ್ದು ,ಹೆಚ್ಚಿನ ಕುಟುಂಬಗಳು ನಾಲ್ಕರಿಂದ ಆರು ಜನ ಸದಸ್ಯರನ್ನು ಹೊಂದಿದ್ದಾರೆ.ಪ್ರತಿಶತ 59 ದುಡಿಮೆಗಾರರು 15000 ಕ್ಕಿಂತ ಹೆಚ್ಚಿನ ಆದಾಯವನ್ನು ಹೊಂದಿದ್ದು ಇಲ್ಲಿಯೂ ಸಹ ನಾಲ್ಕರಿಂದ ಆರು ಜನ ಸದಸ್ಯರನ್ನು ಹೊಂದಿವೆ. ಕುಟುಂಬದ ಗಾತ್ರ ಹಾಗೂ ಆದಾಯ ಗಳಿಕೆಯ ನಡುವೆ ಸಾಧಾರಣವಾದ ಸಹಸಂಬಂಧವಿದ್ದು, **ಪಿಯರ್ಸನ್** ಸಹಸಂಬಂಧದ ಗುಣಾಂಕವು 0.25 ರಷ್ಟಾಗಿದೆ.

**ಗಿರಣಿಯಲ್ಲಿ ದುಡಿಮೆಗಾರರ ಉದ್ಯೋಗ ಮತ್ತು ವಾಸದ ಅವಧಿ**

ವ್ಯಕ್ತಿಯ ಮೂಲ ಅವಶ್ಯಕತೆಗಳನ್ನ ಪೂರೈಸಿಕೊಳ್ಳಲು ಉದ್ಯೋಗ ಹೊಂದುವುದು ಪ್ರತಿಯೊಬ್ಬ ವ್ಯಕ್ತಿಗೂ ಅತ್ಯಂತ ಅವಶ್ಯಕ ಅಂಶಗಳಲ್ಲೊಂದಾಗಿದೆ.ಅಧ್ಯಯನ ಕ್ಷೇತ್ರದಲ್ಲಿ ಸಮೀಕ್ಷೆಗೊಳಪಡಿಸಿದ ದುಡಿಮೆಗಾರರ ಉದ್ಯೋಗ ಮತ್ತು ವಾಸದ ಅವಧಿ ಸಂಬಂಧಿಸಿದ ಅಂಕಿ ಅಂಶಗಳನ್ನು ಕೋಷ್ಟಕ 4 ರಲ್ಲಿ ಸಂಕ್ಷೇಪಿಸಲಾಗಿದೆ.

**ಕೋಷ್ಟಕ 4: ಗಿರಣಿಯಲ್ಲಿ ದುಡಿಮೆಗಾರರ ಉದ್ಯೋಗ ಮತ್ತು ವಾಸದ ಅವದಿ**

| ದುಡಿಮೆಗಾರರ ಉದ್ಯೋಗ | ವಾಸದ ಅವಧಿ | | ಒಟ್ಟು | ಪ್ರತಿಶತ |
|---|---|---|---|---|
| | 1 ವರ್ಷಕ್ಕಿಂತ ಕಡಿಮೆ | 6 ಕ್ಕಿಂತ ಹೆಚ್ಚು | | |
| ಹತ್ತಿ ಬೀಜ ತೆಗೆಯುವವರು | 2 | 0 | 2 | 5 |
| ಸ್ವಚ್ಛ ಗೊಳಿಸುವವರು | 0 | 20 | 20 | 45 |
| ಫಿಟ್ಟರ್ | 3 | 4 | 7 | 16 |
| ಹತ್ತಿ ಬಿಡಿಸುವವರು | 0 | 4 | 4 | 9 |
| ನಿರ್ವಹಣೆ | 0 | 11 | 11 | 25 |
| ಒಟ್ಟು | 5 | 39 | 44 | 100 |
| ಪ್ರತಿಶತ | 11 | 89 | 100 | |

**ಮೂಲ: ಕ್ಷೇತ್ರ ಕಾರ್ಯ**

ಅಧ್ಯಯನ ಕ್ಷೇತ್ರದಲ್ಲಿ ಸಮೀಕ್ಷೆಗೊಳಪಡಿಸಿದ ದುಡಿಮೆಗಾರರು ಹತ್ತಿಗಿರಣಿಯಲ್ಲಿ ಹತ್ತಿ ಬೀಜ ತೆಗೆಯುವವರು, ಸ್ವಚ್ಛ ಗೊಳಿಸುವವರು, ಫಿಟ್ಟರ್, ಹತ್ತಿ ಬಿಡಿಸುವವರು, ಮತ್ತು ನಿರ್ವಹಣೆಯಂತಹ

ಐದು ವಿವಿಧ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಪ್ರತಿಶತ 5 ರಷ್ಟು ದುಡಿಮೆಗಾರರು ಹತ್ತಿ ಬೀಜ ತೆಗೆಯುವವರು, ಪ್ರತಿಶತ 45 ರಷ್ಟು ದುಡಿಮೆಗಾರರು ಸ್ವಚ್ಚ ಗೊಳಿಸುವವರು, ಪ್ರತಿಶತ 16 ರಷ್ಟು ದುಡಿಮೆಗಾರರು ಫಿಟ್ಟರ್, ಪ್ರತಿಶತ 9 ರಷ್ಟು ಹತ್ತಿ ಬಿಡಿಸುವವರು, ಹಾಗೂ ಪ್ರತಿಶತ 25 ರಷ್ಟು ದುಡಿಮೆಗಾರರು ನಿರ್ವಹಣೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ದುಡಿಮೆಗಾರರ ವಾಸದ ಅವಧಿಯನ್ನು ಗಮನಿಸಿದರೆ ಸ್ಥಳೀಯವಾಗಿ ಪ್ರತಿಶತ 11 ರಷ್ಟು ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ವಾಸವಾಗಿದ್ದಾರೆ, ಇವರು ಇತ್ತೀಚೆಗೆ ಬಂದವರಾಗಿದ್ದಾರೆ.ಪ್ರತಿಶತ 89 ರಷ್ಟು ದುಡಿಮೆಗಾರರು ಆರು ವರ್ಷಕ್ಕಿಂತ ಹೆಚ್ಚು ಅವಧಿಯಿಂದ ಸ್ಥಳೀಯವಾಗಿ ವಾಸವಾಗಿದ್ದಾರೆ.

**ದುಡಿಮೆಗಾರರ ಜಾತಿ ಮತ್ತು ಅಂತರಜಾತಿ ವಿವಾಹ**

ಮಾನವ ಸಂಘಜೀವಿ ಎಂಬುದು ಇಂದಿಗೂ ಸತ್ಯವಾದ ಮಾತು.ಪ್ರತೀ ವ್ಯಕ್ತಿಗೂ ಸಮಾಜದಲ್ಲಿ ಸ್ಥಾನಮಾನ, ಜಾತಿಯ ಹಿನ್ನೆಲೆ ಹೆಚ್ಚು ಪ್ರಮುಖವೆನಿಸುತ್ತವೆ. ಕೋಷ್ಟಕ 5 ರಲ್ಲಿ ದುಡಿಮೆಗಾರರ ಜಾತಿ ಮತ್ತು ಅಂತರಜಾತಿ ವಿವಾಹದ ಹಿನ್ನೆಲೆಯ ಬಗ್ಗೆ ದತ್ತಾಂಶಗಳನ್ನು ಸಂಕ್ಷೇಪಿಸಲಾಗಿದೆ.

**ಕೋಷ್ಟಕ 5: ದುಡಿಮೆಗಾರರ ಜಾತಿ ಮತ್ತು ಅಂತರಜಾತಿ ವಿವಾಹ**

| | ಅಂತರಜಾತಿ ವಿವಾಹ | | | | |
|---|---|---|---|---|---|
| ಜಾತಿ | ಇದೆ | ಇಲ್ಲ | ಒಟ್ಟು | ಪ್ರತಿಶತ | ಒಟ್ಟು ಪ್ರತಿಶತ |
| ದೇವಾಂಗ | 0 | 9 | 9 | 20.4 | 20.4 |
| ಮುಸ್ಲಿಂ | 2 | 5 | 7 | 15.9 | 36.3 |
| ಕುರುಬ | 0 | 4 | 4 | 9 | 45.3 |
| ಆಚಾರ | 0 | 2 | 2 | 4.5 | 49.8 |
| ಗೊಲ್ಲಾ | 0 | 2 | 2 | 4.5 | 54.3 |
| ಪರಿಶಿಷ್ಟ ಜಾತಿ | 2 | 0 | 2 | 4.5 | 58.8 |
| ಪರಿಶಿಷ್ಟ ಪಂಗಢ | 0 | 7 | 7 | 15.9 | 74.7 |
| ಕುಂಬಾರ | 0 | 2 | 2 | 4.5 | 79.2 |
| ಲಿಂಗಾಯತ | 0 | 6 | 6 | 13.6 | 92.8 |
| ಮರಾಠ | 3 | 0 | 3 | 6.8 | 100 |
| ಒಟ್ಟು | 7 | 37 | 44 | 100 | |
| ಪ್ರತಿಶತ | 15.9 | 84.1 | 100 | | |
| ಒಟ್ಟು ಪ್ರತಿಶತ | 15.9 | 100 | | | |

**ಮೂಲ: ಕ್ಷೇತ್ರ ಕಾರ್ಯ**

ಅಧ್ಯಯನಕ್ಕೊಳಪಟ್ಟ ದುಡಿಮೆಗಾರರಲ್ಲಿ ಹತ್ತು ವಿವಿಧ ಜಾತಿಗಳ ಹಿನ್ನೆಲೆಯ ದುಡಿಮೆಗಾರರಿದ್ದು, ದೇವಾಂಗ,ಮುಸ್ಲೀಂ, ಕುರುಬ, ಆಚಾರ, ಗೊಲ್ಲಾ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಕುಂಬಾರ, ಲಿಂಗಾಯತ, ಹಾಗೂ ಮರಾಠ ಜಾತಿಗಳು ಪ್ರಮುಖವಾಗಿವೆ. ಇವರಲ್ಲಿ ಪ್ರತಿಶತ 15.9 ರಷ್ಟು ದುಡಿಮೆಗಾರರು ಅಂತರಜಾತಿ ವಿವಾಹ ಆಚರಣೆ ಇದೆ ಎಂದಿದ್ದಾರೆ.ಮುಸ್ಲಿಂ, ಪರಿಶಿಷ್ಟ ಜಾತಿ, ಮರಾಠ ಸಮುದಾಯದ ಹಿನ್ನೆಲೆ ಹೊಂದಿರುವ ದುಡಿಮೆಗಾರರು ಅಂತರಜಾತಿ ವಿವಾಹ ಆಚರಣೆ ಇದೆ ಎಂದಿದ್ದಾರೆ. ಪ್ರತಿಶತ 84.1 ರಷ್ಟು ದುಡಿಮೆಗಾರರು ಅಂತರಜಾತಿ ವಿವಾಹದ ಸಂಪ್ರದಾಯಗಳನ್ನು ಆಚರಣೆ ಮಾಡುವುದಿಲ್ಲ ಎಂದಿದ್ದಾರೆ.

**ದುಡಿಮೆಗಾರರ ಜಾತಿ ಮತ್ತು ಮಹಿಳಾ ಸ್ವಾತಂತ್ರ್ಯ**

ಸ್ವಾತಂತ್ರ್ಯ ಎನ್ನುವುದು ಲಿಂಗಾಧಾರಿತವಾಗಿ ಪುರುಷರಿಗೆ ಅಥವಾ ಮಹಿಳೆಯರಿಗಷ್ಟೆ ಸೀಮಿತವಲ್ಲ. ಸ್ತ್ರೀ ಪುರುಷರ ಸಮಾನತೆಯ ಪರಿಕಲ್ಪನೆ ಹೆಚ್ಚು ಮುಖ್ಯವೆನಿಸುತ್ತದೆ. ದುಡಿಮೆಗಾರರ ಜಾತಿ ಮತ್ತು ಮಹಿಳಾ ಸ್ವಾತಂತ್ರ್ಯಕ್ಕಿರುವ ಪ್ರಾಮುಖ್ಯತೆಯ ಕುರಿತ ಸಮೀಕ್ಷೆಯ ಅಂಕಿ ಅಂಶಗಳನ್ನು ಕೋಷ್ಟಕ 6 ರಲ್ಲಿ ಸಂಕ್ಷೇಪಿಸಲಾಗಿದೆ.

**ಕೋಷ್ಟಕ 6: ದುಡಿಮೆಗಾರರದ ಜಾತಿ ಮತ್ತು ಮಹಿಳಾ ಸ್ವಾತಂತ್ರ್ಯ**

| ಮಹಿಳಾ ಸ್ವಾತಂತ್ರ್ಯ | | | | ಪ್ರತಿಶತ | ಒಟ್ಟು ಪ್ರತಿಶತ |
|---|---|---|---|---|---|
| ಜಾತಿ | ಇಲ್ಲ | ಇದೆ | ಒಟ್ಟು | | |
| ದೇವಾಂಗ | 0 | 9 | 9 | 20.4 | 20.4 |
| ಮುಸ್ಲೀಂ | 5 | 2 | 7 | 15.9 | 36.3 |
| ಕುರುಬ | 0 | 4 | 4 | 9 | 45.3 |
| ಆಚಾರ | 0 | 2 | 2 | 4.5 | 49.8 |
| ಗೊಲ್ಲಾ | 0 | 2 | 2 | 4.5 | 54.3 |
| ಪರಿಶಿಷ್ಟ ಜಾತಿ | 0 | 2 | 2 | 4.5 | 58.8 |
| ಪರಿಶಿಷ್ಟ ಪಂಗಢ | 0 | 7 | 7 | 15.9 | 74.7 |
| ಕುಂಬಾರ | 0 | 2 | 2 | 4.5 | 79.2 |
| ಲಿಂಗಾಯತ | 0 | 6 | 6 | 13.6 | 92.8 |
| ಮರಾಠ | 0 | 0 | 3 | 6.8 | 100 |
| ಒಟ್ಟು | 5 | 39 | 44 | 100 | |
| ಪ್ರತಿಶತ | 11.4 | 88.6 | 100 | | |
| ಒಟ್ಟು ಪ್ರತಿಶತ | 11.4 | 100 | | | |

**ಮೂಲ: ಕ್ಷೇತ್ರ ಕಾರ್ಯ**

ಒಟ್ಟು ಹತ್ತು ವಿವಿಧ ಜಾತಿಗಳನ್ನು ಅಧ್ಯಯನಕ್ಕೊಳಪಡಿಸಿದ ದುಡಿಮೆಗಾರರಲ್ಲಿ ಗುರುತಿಸಲಾಗಿದ್ದು, ಪ್ರತಿಕ್ರಯಿಸಿದವರಲ್ಲಿ ಪ್ರತಿಶತ 88.6 ರಷ್ಟು ದುಡಿಮೆಗಾರರು ತಮ್ಮ ಕುಟುಂಬದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವಿದೆ ಎಂದಿದ್ದಾರೆ. ಪ್ರತಿಕ್ರಯಿಸಿದವರಲ್ಲಿ ಪ್ರತಿಶತ 11.4 ರಷ್ಟು ಮುಸ್ಲೀಂ ಸಮುದಾಯದ ದುಡಿಮೆಗಾರರು ತಮ್ಮ ಕುಟುಂಬದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವಿಲ್ಲ ಎಂದಿದ್ದಾರೆ.

**ಆಧುನಿಕರಣವನ್ನು ಒಪ್ಪಿಕೊಳ್ಳುವಿಕೆ ಹಾಗೂ ಬದಲಾವಣೆ**

ಆಧುನೀಕರಣ ಸಿದ್ಧಾಂತದ ಪ್ರತಿಪಾದಕರು ಆಧುನಿಕ ಜಗತ್ತಿನಲ್ಲಿ ನಾಗರಿಕರು ಉನ್ನತ ಮಟ್ಟದ ಜೀವನ ಮಟ್ಟವನ್ನು ಆನಂದಿಸಲು ಮುಕ್ತರಾಗಿದ್ದಾರೆ ಎಂದು ಪ್ರತಿಪಾದಿಸುತ್ತಾರೆ. ಸಾಂಪ್ರದಾಯಿಕ ಸಮಾಜಗಳು ಹೆಚ್ಚು ಆಧುನಿಕ ಅಭ್ಯಾಸಗಳನ್ನು ಅಳವಡಿಸಿಕೊಂಡಂತೆ ಅಭಿವೃದ್ಧಿ ಹೊಂದುತ್ತವೆ ಎಂದು ಆಧುನೀಕರಣ ಸಿದ್ಧಾಂತವು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ದುಡಿಮೆಗಾರರ ಆಧುನಿಕರಣವನ್ನು ಒಪ್ಪಿಕೊಳ್ಳುವಿಕೆ ಹಾಗೂ ಬದಲಾವಣೆ ಕುರಿತ ಅಂಕಿ ಅಂಶಗಳನ್ನು ಕೋಷ್ಟಕ 7 ರಲ್ಲಿ ಸಂಕ್ಷೇಪಿಸಲಾಗಿದೆ.

**ಕೋಷ್ಟಕ 7 ಆಧುನೀಕರಣ ಆಧುನಿಕತರಣದೊಂದಿಗೆ ಬದಲಾವಣೆ**

| ಆಧುನಿಕತರಣದೊಂದಿಗೆ ಬದಲಾವಣೆ | ಆಧುನೀಕರಣ | | ಒಟ್ಟು | ಪ್ರತಿಶತ | ಒಟ್ಟು ಪ್ರತಿಶತ |
|---|---|---|---|---|---|
| | ಒಪ್ಪುತ್ತೇವೆ | ಒಪ್ಪುವುದಿಲ್ಲ | | | |
| ಹೌದು | 42 | 0 | 42 | 95.5 | 95.5 |
| ಇಲ್ಲ | 0 | 2 | 2 | 4.5 | 100 |
| ಒಟ್ಟು | 42 | 2 | 44 | 100 | |
| ಪ್ರತಿಶತ | 95.5 | 4.5 | 100 | | |
| ಒಟ್ಟು ಪ್ರತಿಶತ | 95.5 | 100 | | | |
| ಮೂಲ: ಕ್ಷೇತ್ರ ಕಾರ್ಯ | | | | | |

ಪ್ರತಿಶತ 95.5 ರಷ್ಟು ದುಡಿಮೆಗಾರರು ಆಧುನಿಕರಣವನ್ನು ಒಪ್ಪಿಕೊಳ್ಳುತ್ತೇವೆ ಎಂದಿದ್ದಾರೆ ಜೊತೆಗೆ ಆಧುನಿಕತರಣದೊಂದಿಗೆ ಬದಲಾವಣೆ ಹೊಂದುತ್ತೇವೆ ಎಂದಿದ್ದಾರೆ.ಪ್ರತಿಶತ 4.5 ರಷ್ಟು ದುಡಿಮೆಗಾರರು ಆಧುನಿಕರಣವನ್ನು ಒಪ್ಪಿಕೊಳ್ಳುವುದಿಲ್ಲ ಆಧುನಿಕತರಣದೊಂದಿಗೆ ಬದಲಾವಣೆ ಸಾಧ್ಯವಿಲ್ಲ ಎಂದಿದ್ದಾರೆ.ಬಹುತೇಕ ದುಡಿಮೆಗಾರರು ಆಧುನೀಕರಣದ ಪರವಾಗಿದ್ದಾರೆ ಎನ್ನಬಹುದು.

**ಅಧ್ಯಯನದ ಫಲಿತಗಳು**

- ಪ್ರತಿಶತ 88.6 ರಷ್ಟು ಪ್ರತಿಸ್ಪಂದಕರು ಸಮುದಾಯ ಸಂಘಟನೆ ಇದೆ ಎಂದಿದ್ದಾರೆ. ಇವರಲ್ಲಿ 43.2 ರಷ್ಟು ಜನ ಸಮುದಾಯ ಸಂಘಟನೆಯ ಸದಸ್ಯತ್ವ ಹೊಂದಿದ್ದಾರೆ. 45.4 ರಷ್ಟು ಜನ ಸಮುದಾಯ ಸಂಘಟನೆ ಇದ್ದರೂ ಸಹ ಸದಸ್ಯತ್ವ ಪಡೆದಿಲ್ಲ.
- ಪ್ರತಿಶತ 88.6 ರಷ್ಟು ದುಡಿಮೆಗಾರರು ತಮ್ಮ ಕುಟುಂಬಗಳಲ್ಲಿ ಮಹಿಳಾ ಸಮಾನತೆ ಇದೆ ಎಂದಿದ್ದಾರೆ.ಇವರಲ್ಲಿ ಪ್ರತಿಶತ 77.2 ರಷ್ಟು ಜನ ಮಹಿಳೆಯರ ಹೊರಗಡೆ ದುಡಿಯುವುದನ್ನು ಪ್ರೋತ್ಸಾಹಿಸುತ್ತೇವೆ ಎಂದಿದ್ದಾರೆ
- ಪ್ರತಿಶತ 63.6 ರಷ್ಟು ಕುಟುಂಬಗಳು 4–6 ಜನ ಸದಸ್ಯರನ್ನು ಹೊಂದಿವೆ. ಪ್ರತಿಶತ 31.8 ರಷ್ಟು ಕುಟುಂಬಗಳು ಏಳಕ್ಕಿಂತ ಹೆಚ್ಚು ಜನ ಸದಸ್ಯರನ್ನು ಹೊಂದಿವೆ.ಪ್ರತಿಶತ 41 ರಷ್ಟು ದುಡಿಮೆಗಾರರು ಕನಿಷ್ಠ 10000 ರಿಂದ 15000 ಸಾವಿರ ರೂ. ಗಳ ಒಟ್ಟು ಕುಟುಂಬದ ಆದಾಯವನ್ನು ಹೊಂದಿದ್ದು, ಹೆಚ್ಚಿನ ಕುಟುಂಬಗಳು ನಾಲ್ಕರಿಂದ ಆರು ಜನ ಸದಸ್ಯರನ್ನು ಹೊಂದಿದ್ದಾರೆ
- ಅಧ್ಯಯನ ಕ್ಷೇತ್ರದಲ್ಲಿ ಸಮೀಕ್ಷೆಗೊಳಪಡಿಸಿದ ದುಡಿಮೆಗಾರರು ಹತ್ತಿಗಿರಣಿಯಲ್ಲಿ ಹತ್ತಿ ಬೀಜ ತೆಗೆಯುವವರು, ಸ್ವಚ್ಚ ಗೊಳಿಸುವವರು, ಫಿಟ್ಟರ್, ಹತ್ತಿ ಬಿಡಿಸುವವರು, ಮತ್ತು ನಿರ್ವಹಣೆಯಂತಹ ಐದು ವಿವಿಧ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ.
- ಅಧ್ಯಯನಕ್ಕೊಳಪಟ್ಟ ದುಡಿಮೆಗಾರರಲ್ಲಿ ಹತ್ತು ವಿವಿಧ ಜಾತಿಗಳ ಹಿನ್ನೆಲೆಯ ದುಡಿಮೆಗಾರರಿದ್ದು, ದೇವಾಂಗ,ಮುಸ್ಲೀಂ, ಕುರುಬ, ಆಚಾರ, ಗೊಲ್ಲಾ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಕುಂಬಾರ, ಲಿಂಗಾಯತ, ಹಾಗೂ ಮರಾಠ ಜಾತಿಗಳು ಪ್ರಮುಖವಾಗಿವೆ.
- ಪ್ರತಿಶತ 88.6 ರಷ್ಟು ದುಡಿಮೆಗಾರರು ತಮ್ಮ ಕುಟುಂಬದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವಿದೆ ಎಂದಿದ್ದಾರೆ. ಪ್ರತಿಕ್ರಯಿಸಿದವರಲ್ಲಿ ಪ್ರತಿಶತ 11.4 ರಷ್ಟು ದುಡಿಮೆಗಾರರು ತಮ್ಮ ಕುಟುಂಬದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವಿಲ್ಲ ಎಂದಿದ್ದಾರೆ.
- ಪ್ರತಿಶತ 88.6 ರಷ್ಟು ದುಡಿಮೆಗಾರರು ತಮ್ಮ ಕುಟುಂಬಗಳಲ್ಲಿ ಮಹಿಳಾ ಸಮಾನತೆ ಇದೆ ಎಂದಿದ್ದಾರೆ.ಇವರಲ್ಲಿ ಪ್ರತಿಶತ 77.2 ರಷ್ಟು ಜನ ಮಹಿಳೆಯರ ಹೊರಗಡೆ ದುಡಿಯುವುದನ್ನು ಪ್ರೋತ್ಸಾಹಿಸುತ್ತೇವೆ ಎಂದಿದ್ದಾರೆ.
- ಪ್ರತಿಶತ 95.5 ರಷ್ಟು ದುಡಿಮೆಗಾರರು ಆಧುನಿಕರಣವನ್ನು ಒಪ್ಪಿಕೊಳ್ಳುತ್ತೇವೆ ಎಂದಿದ್ದಾರೆ ಜೊತೆಗೆ ಆಧುನಿಕತರಣದೊಂದಿಗೆ ಬದಲಾವಣೆ ಹೊಂದುತ್ತೇವೆ ಎಂದಿದ್ದಾರೆ.ಪ್ರತಿಶತ 4.5

ರಷ್ಟು ದುಡಿಮೆಗಾರರು ಆಧುನಿಕರಣವನ್ನು ಒಪ್ಪಿಕೊಳ್ಳುವುದಿಲ್ಲ ಆಧುನಿಕತರಣದೊಂದಿಗೆ ಬದಲಾವಣೆ ಸಾಧ್ಯವಿಲ್ಲ ಎಂದಿದ್ದಾರೆ.

**ಸಮಾರೋಪ**

ದೇಶದ ಆಥಿಕತೆಯಲ್ಲಿ ಸಂಘಟಿತ ಕಾರ್ಮಿಕರ ಕೊಡುಗೆ ಅತ್ಯಲ್ಪ, ಆದರೆ ಅಸಂಘಟಿತ ಕಾರ್ಮಿಕರ ಕೊಡುಗೆ ಅಪಾರ.ದೇಶದ ಬಹುಪಾಲು ದುಡಿಯುವ ವರ್ಗ ಅಸಂಘಟಿತ ವಲಯದಲ್ಲಿದೆ. ದೇಶದ ಅಸಂಘಟಿತ ಕಾರ್ಮಿಕರು ಸಾಮಾಜಿಕ ಭದ್ರತೆಯಿಂದ ಬಳಲುತ್ತಿದ್ದಾರೆ. ಇವರಿಗೆ ಕನಿಷ್ಟ ವೇತನ, ಬೋನಸ್, ಪಿಎಫ್ ಸೌಲಭ್ಯಗಳು ಸಿಗುತ್ತಿಲ್ಲ. ಅಧ್ಯಯನ ಕ್ಷೇತ್ರದಲ್ಲಿ ಸಮೀಕ್ಷೆಗೊಳಪಡಿಸಿದ ದುಡಿಮೆಗಾರರು ಹತ್ತಿಗಿರಣಿಯಲ್ಲಿ ಹತ್ತಿ ಬೀಜ ತೆಗೆಯುವವರು, ಸ್ವಚ್ಚ ಗೊಳಿಸುವವರು, ಫಿಟ್ಟರ್, ಹತ್ತಿ ಬಿಡಿಸುವವರು, ಮತ್ತು ನಿರ್ವಹಣೆಯಂತಹ ಐದು ವಿವಿಧ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಅಧ್ಯಯನಕ್ಕೊಳಪಟ್ಟ ದುಡಿಮೆಗಾರರಲ್ಲಿ ಹತ್ತು ವಿವಿಧ ಜಾತಿಗಳ ಹಿನ್ನೆಲೆಯ ದುಡಿಮೆಗಾರರಿದ್ದು, ದೇವಾಂಗ,ಮುಸ್ಲೀಂ, ಕುರುಬ, ಆಚಾರ, ಗೊಲ್ಲಾ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಢ, ಕುಂಬಾರ, ಲಿಂಗಾಯತ, ಹಾಗೂ ಮರಾಠ ಜಾತಿಗಳು ಪ್ರಮುಖವಾಗಿವೆ.

**ಪರಾಮರ್ಶನ ಗ್ರಂಥಗಳು**


- ಅರುಫ್ ಮಿತ್ರಾ. (2014). ಅರ್ಬನ್ ಇನ್ ಫಾರ್ಮಲ್ ಸೆಕ್ಟಾರ್ ಇನ್ ಇಂಡಿಯಾ. ಯೋಜನ ಮಾಸಿಕ, ಬೆಂಗಳೂರು.
- ಗಂಗಪ್ಪ ಕೆ ಹೆಚ್. (1981). ಕಾರ್ಮಿಕ ರತ್ನದ ಕೆಂಪು ಕಥೆ. ವಿನಾಯಕ ಪ್ರಿಂಟಿಂಗ್ ಪ್ರೆಸ್ ದಾವಣಗೆರೆ.
- ಜೊಶಿ. (ಡಿಸೆಂಬರ್10, 2019). ಅಸಂಘಟಿತ ವಲಯ: ದಾಖಲೆಯಲ್ಲಿ? ಪ್ರಜಾವಾಣಿ ದಿನಪತ್ರಿಕೆ, ಬೆಂಗಳೂರು.
- ಮಧುಸೂದನ್ ರಂಗೇನಹಳ್ಳಿ ಕು ಸ. (2017). ಅಸಂಘಟಿತ ವಲಯದ ಕಾರ್ಮಿಕರ ಸಮಸ್ಯೆಗಳು. ಕನ್ನಡ ಪ್ರತಿಲಿಪಿ, ಬೆಂಗಳೂರು.
- ನಾಗಮೋಹನ್ ದಾಸ್ ಹೆಚ್ ಎನ್. (2016). ಅಸಂಘಟಿತ ಕಾರ್ಮಿಕರ ಸಾಮಜಿಕ ಭದ್ರತೆ ಕಾಯ್ದೆಯ ನ್ಯೂನತೆಗಳು, ಜನಶಕ್ತಿ, ಬೆಂಗಳೂರು.
- ಸ್ವರ್ಣಲತಾ ಬಿ. (2016). ಗುತ್ತಿಗೆ ಕಾರ್ಮಿಕರ ಕಾರ್ಯ ತೃಪ್ತಿಯ ಕುರಿತು ಒಂದು ಅಧ್ಯಯನ ಇಂಟರ್ ನ್ಯಾಷಿನಲ್ ಜರ್ನಲ್ ಆಫ್ ವರ್ಲ್ಡ ರಿಸರ್ಚ್, ಸಂಚಿಕೆ–1.